# ನ್ಯಾನೋ ಫ್ಯಾಟ್

## ಪ್ಲಾಸ್ಟಿಕ್ ಸರ್ಜರಿಯ ನೂತನ ಆವಿಷ್ಕಾರ

**ಡಾ || ಅನಿಕೇತ್ ವೆಂಕಟರಾಮ್**

MBBS, MS, MCH, FDAFPRS (ಬೆಲ್ಜಿಯಂ) FASAPS (USA)

**ಪ್ಲಾಸ್ಟಿಕ್ ಹಾಗೂ ಕಾಸ್ಮೆಟಿಕ್ ಶಸ್ತ್ರ ತಜ್ಞರು. ಇವರು ನ್ಯಾನೋಫ್ಯಾಟ್‌ನ ಮೂಲ ಸಂಶೋಧಕರೆಂದು ಪ್ರಸಿದ್ಧಿ ಪಡೆದ ಬೆಲ್ಜಿಯಂನ ಪ್ಯಾಟ್ರಿಕ್ ಟೋನಾರ್ಡ್ ಮತ್ತು ಅಲೆಕ್ಸ್ ವೆರ್ಪಲೆ ಅಡಿಯಲ್ಲಿ ತರಬೇತಿ ಪಡೆದು, ವೆಂಕಟ್ ಚರ್ಮಾಲಯ ಕೇಂದ್ರದಲ್ಲಿ ವಿನೂತನವಾಗಿ ಪರಿಚಯಿಸಿದ್ದಾರೆ.**



ನೆರಿಗೆಗಳು, ಸುಕ್ಕುಗಳು, ಗುಳಿಬಿದ್ದ ಕಣ್ಣುಗಳು ಮತ್ತು ಕಪ್ಪು ವೃತ್ತಗಳು ಸೇರಿದಂತೆ ವಿವಿಧ ಸೌಂದರ್ಯ ಸಮಸ್ಯೆಗಳಿಂದ ಅನೇಕ ಜನರು ತೊಂದರೆಗೊಳಗಾಗಿರುತ್ತಾರೆ. ಈ ಸಮಸ್ಯೆಗಳಿಗೆ ಇದುವರೆಗೂ ಯಾವುದೇ ತೃಪ್ತಿದಾಯಕ ಹಾಗೂ ಕಡಿಮೆ ವೆಚ್ಚದ ಚಿಕಿತ್ಸೆ ಇರಲಿಲ್ಲ.

ನ್ಯಾನೋಫ್ಯಾಟ್ (ಕೊಬ್ಬಿನ ಕಸಿ ಮಾಡುವಿಕೆ) ಮುಖದ ತಾರುಣ್ಯವನ್ನು ಪುನಃ ಸ್ಥಾಪಿಸಲು ಒಂದು ಸುಲಭವಾದ ವಿಧಾನ. ಇದೊಂದು ಕ್ರಾಂತಿಕಾರಿ ಚಿಕಿತ್ಸಾ ವಿಧಾನವಾಗಿದೆ. ನ್ಯಾನೋಫ್ಯಾಟ್ ಮೂಲಕ ವಿಶಿಷ್ಟವಾದ ಕೊಬ್ಬಿನ ಜೀವಕೋಶಗಳು ಹಾಗೂ Stemcell (ಕಾಂಡಕೋಶ)ಗಳನ್ನು ಹೊರತೆಗೆದು ಅವುಗಳನ್ನು ಇಂಜೆಕ್ಷನ್ ಮೂಲಕ ಅಗತ್ಯವಿರುವ ಜಾಗಕ್ಕೆ ತುಂಬಲಾಗುವುದು. ಈ ಕಾಂಡಕೋಶಗಳು ಹೊಸ ಜೀವಕೋಶಗಳನ್ನು ವೃದ್ಧಿ ಪಡಿಸುತ್ತದೆ.

ನ್ಯಾನೋಫ್ಯಾಟ್ ಕಸಿ ಮಾಡುವಿಕೆಯು, ಆಕಾರವನ್ನು ಪುನಃ ಸ್ಥಾಪಿಸುವುದಲ್ಲದೇ ವಯಸ್ಸಾದ ಮತ್ತು ಮುದಿ ಚರ್ಮವನ್ನು ಪುನರ್ ಯೌವನಗೊಳಿಸುವುದಕ್ಕಾಗಿ ಕಾಂಡಕೋಶಗಳನ್ನು ಸರಬರಾಜು ಮಾಡುತ್ತದೆ. ಇದನ್ನು ಕಣ್ಣಿನ ಕಪ್ಪು ವೃತ್ತಗಳಿಗೆ, ಸುಕ್ಕುಗಳಿಗೆ ಮತ್ತು ಮಡಿಕೆಗಳು ಮುಂತಾದ ವಯೋಸಹಜ ಚಿಹ್ನೆಗಳಿಗೆ ಬಳಸಬಹುದು. ಇದನ್ನು ರೋಗಿಗಳಿಗೆ ಗಲ್ಲದ ಅಥವಾ ತುಟಿ ವೃದ್ಧಿಗಾಗಿ ಕೂಡ ಉಪಯೋಗಿಸಬಹುದು. ನ್ಯಾನೋಫ್ಯಾಟ್ ಯಾವುದೇ ಕಾಯಿಲೆಯಿಂದ ಉಂಟಾದ ಗಾಯ ಹಾಗೂ ಸುಟ್ಟ ಗಾಯಗಳಕಲೆಗಳಿಗೆ ಉಪಯೋಗಿಸಬಹುದು.

ನ್ಯಾನೋಫ್ಯಾಟ್ ಕಸಿ ಮಾಡುವಿಕೆಯನ್ನು ಸುಕ್ಕುಗಳಿಗೆ ಹಾಗೂ ಕೆಳಕಂಡ ಭಾಗಗಳಲ್ಲಿ ಉಪಯೋಗಿಸಬಹುದು.

- ಕಣ್ಣಿನ ಅಡಿಯಲ್ಲಿ
- ಹಣೆ
- ಕೆನ್ನೆ
- ಗಲ್ಲದ ವೃದ್ಧಿ
- ತುಟಿ ವೃದ್ಧಿ
- ಇದನ್ನು ಸ್ತನಗಳ ಗಾತ್ರದವೃದ್ಧಿಗೂ ಬಳಸಬಹುದು.
- ಸುಟ್ಟ ಚರ್ಮ (Burn skin)
- ಮೊಡವೆಯಿಂದಾಗುವ ಕಲೆಗಳು
- ಗಾಯಗಳು / ಕಲೆಗಳು
- ಗಲ್ಲದ ಆಕಾರಕ್ಕೆ
- ಸ್ಟ್ರೆಚ್ ಮಾರ್ಕ್ಸ್ ಚಿಕಿತ್ಸೆಗೆ

ಈ ಚಿಕಿತ್ಸೆಗೆ ಫಿಲ್ಲರ್ ಎಂಬ ಕೃತಕ ರಾಸಾಯನಿಕ ವಸ್ತುವನ್ನು ಕೂಡ ಉಪಯೋಗಿಸಲಾಗುತ್ತಿದೆ. ಫಿಲ್ಲರ್‌ಗಳಲ್ಲಿ ಹಲವು ಅನಾನುಕೂಲತೆಗಳಿವೆ. ಫಿಲ್ಲರ್ ಒಂದರಿಂದ ಎರಡು ವರ್ಷಗಳು ಮಾತ್ರ ಬಾಳುತ್ತವೆ. ಹಾಗೂ ದುಬಾರಿ. ಪ್ರತಿ ಮಿ.ಲೀಟರ್‌ಗೆ 25000ರೂ. ವೆಚ್ಚ ತಗಲುತ್ತದೆ. ಫಿಲ್ಲರ್‌ಗಳಿಗೆ ಹೋಲಿಸಿದರೆ, ಕೊಬ್ಬಿನ ಕಸಿಯು ಹೆಚ್ಚಿನ ಗುಣಾಂಶಗಳು ಇವೆ.

- ಇದು ನಿಮ್ಮ ಸ್ವಂತ ಅಂಗಾಂಶವಾಗಿದೆ. ಇದು ರಾಸಾಯನಿಕ ರಹಿತ ಜೈವಿಕ ವಸ್ತು. ಯಾವುದೇ ರೀತಿ ಅಲರ್ಜಿ ಇರುವುದಿಲ್ಲ.
- ಇದು 8–10 ವರ್ಷಗಳಷ್ಟು ದೀರ್ಘಕಾಲ ಇರುತ್ತದೆ. ಆದರೆ ಫಿಲ್ಲರ್ ಕೇವಲ ಒಂದು–ಎರಡು ವರ್ಷದವರೆಗೆ ಮಾತ್ರ ಇರುತ್ತದೆ.
- ನ್ಯಾನೋಫ್ಯಾಟ್ ಫಲಿತಾಂಶ ನೈಸರ್ಗಿಕ ಮತ್ತು ಸಹಜವಾಗಿರುತ್ತದೆ.
- ನ್ಯಾನೋಫ್ಯಾಟ್ ಕಸಿ ಮಾಡುವಿಕೆಯ ವಿಧಾನವು ಸರಳವಾಗಿದೆ.

ಸ್ಥಳಿಯ ಅರವಳಿಕೆ ನೀಡಿ ಸಿರೀಂಜ್ ಅಥವಾ ಸಕ್ಷನ್ ಯಂತ್ರದ ಮೂಲಕ ಹೊಟ್ಟೆ ಅಥವಾ ತೊಡೆಯ ಭಾಗದಿಂದ 10–30ಎಂ.ಎಲ್. ಕೊಬ್ಬನ್ನು ಹೀರಿ ತೆಗೆಯಲಾಗುವುದು. ನಂತರ ಇದನ್ನು ಸಣ್ಣ ಹನಿಗಳು ಮತ್ತು ಕಾಂಡಕೋಶಗಳಾಗಿ ಸಂಸ್ಕರಿಸಲಾಗುತ್ತದೆ. ಸಂಸ್ಕರಿಸಿದ ಕೊಬ್ಬನ್ನು ನಂತರ ಸ್ಥಳೀಯ ಅರಿವಳಿಕೆ ಅಡಿಯಲ್ಲಿ ಮುಖದ ಅಪೇಕ್ಷಿತ ಪ್ರದೇಶಗಳಲ್ಲಿ ಇಂಜೆಕ್ಟ್ ಮಾಡಲಾಗುತ್ತದೆ. ಕೊಬ್ಬು ಕಸಿಯನ್ನು ಮಾಡಿದ ಮೇಲೆ ಯಾವುದೇ ಹೊಲಿಗೆಗಳು ಇರುವುದಿಲ್ಲ. ಕೊಬ್ಬು ವರ್ಗಾವಣೆಯ ನಂತರ ಅದು ತನ್ನದೇ ದೇಹದಿಂದ ಇರುವುದರಿಂದ ಯಾವುದೇ ತಿರಸ್ಕಾರ ಅಥವಾ ಅಲರ್ಜಿ ಇರುವುದಿಲ್ಲ. ಚಿಕಿತ್ಸೆ ಕೇವಲ ಒಂದು ಗಂಟೆಯಲ್ಲಿ ಮುಗಿಯುತ್ತದೆ. ಆದರಿಂದ ಅದೇ ದಿನ ಮನೆಗೆ ಮರಳಬಹುದು. 3–5 ದಿನಗಳ ಕಾಲ ಸ್ವಲ್ಪ ಊತ ಇರುತ್ತದೆ.

❖ ಚಿಕಿತ್ಸೆಯ ಅತಿ ದೊಡ್ಡ ಪ್ರಯೋಜನವೆಂದರೆ ಇದರ ದೀರ್ಘಾಯುಷ್ಯ ಫಲಿತಾಂಶವು 10 ವರ್ಷಗಳವರೆಗೆ ಇರುವುದು.

**The Venkat Center for Skin & Plastic Surgery,** # 3411, Chord Road, Subbanna Garden, Next to BTS Garage, Vijayanagar, Bangalore-40, **080-23392788,23392419,23180818,**
Vijayanagar **09611842627** | Cunningham Road **080-41148848/09739038714**
Banashankari **080-26722228/09611563786,** Phone: **9611842627, 080-23180818, 080-41148848**
www.venkatcenter.com | www.bangaloreplasticsurgeon.com | info@venkatcenter.com